**ಡಿ.ಡಬ್ಲ್ಯು1**

ಸಾಕ್ಷಿಯುನ್ನು ದಿನಾಂಕ 17-02-2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಃ ಆರೋಪಿ ಪರ ಶ್ರೀ.ವಿ.ಬಿ.ಟಿ ವಕೀಲರಿಂದ**

1. ದಿಃ 12-07-2016 ರ ನೋಂದಾಯಿತ ಖರೀದಿ ಪತ್ರ ಹಾಜರಪಡಿಸಿದ್ದು ಅದನ್ನು ನಿಡಿ-1 ಎಂದು, ಗುರುತಿಸಲಾಯಿತು. ಸಾಕ್ಷಿ ನಿಡಿ-1 ರಲ್ಲಿ ಇರುವ ತನ್ನ ಸಹಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

2. ದಿಃ 06-02-2018 ರ ನೋಂದಾಯಿತ ಖರೀದಿ ಪತ್ರದ ರದ್ದತಿ ಪತ್ರ ಹಾಜರಪಡಿಸಿದ್ದು ಅದನ್ನು ನಿಡಿ-2 ಎಂದು, ಗುರುತಿಸಲಾಯಿತು. ಸಾಕ್ಷಿ ನಿಡಿ-2 ರಲ್ಲಿ ಇರುವ ತನ್ನ ಸಹಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ-2(ಎ) ಎಂದು ಗುರುತಿಸಲಾಯಿತು.

3. ರುಣಭಾರ ಪ್ರಮಾಣ ಪತ್ರಹಾಜರಪಡಿಸಿದ್ದು ಅದನ್ನು ನಿಡಿ-3 ಎಂದು, ಗುರುತಿಸಲಾಯಿತು.

4. 11-12-2020 ರಂದು ನಮ್ಮ ವಕೀಲರ ಮೂಲಕ ನೀಡಿರುವ ಲೀಗಲ್ ನೋಟಿಸಿನ ಕಚೇರಿ ಪ್ರತಿ ಹಾಜರಪಡಿಸಿದ್ದು ಅದನ್ನು ನಿಡಿ-4 ಎಂದು, ಗುರುತಿಸಲಾಯಿತು.

5. 21-12-2020 ರಂದು ನಮ್ಮ ವಕೀಲರಿಗೆ ನೀಡಿರುವ ಲೀಗಲ ನೋಟಿಸಿನ ಪ್ರತ್ಯುತ್ತರದ ಕಚೇರಿ ಪ್ರತಿ ಹಾಜರಪಡಿಸಿದ್ದು ಅದನ್ನು ನಿಡಿ-5 ಎಂದು, ಗುರುತಿಸಲಾಯಿತು.

6. ಎರಡು ಅಂಚೆ ರಸೀದಿಗಳನ್ನು ಹಾಜರಪಡಿಸಿದ್ದು ಅದನ್ನು ನಿಡಿ-6 ಮತ್ತ ನಿಡಿ-7 ಎಂದು, ಗುರುತಿಸಲಾಯಿತು.

**ಡಿ.ಡಬ್ಲ್ಯು-1**

7. ಎರಡು ಅಂಚೆ ಸ್ವಿಕೃತಿ ಹಾಜರಪಡಿಸಿದ್ದು ಅದನ್ನು ನಿಡಿ-8 ಮತ್ತ ನಿಡಿ-9 ಎಂದು, ಗುರುತಿಸಲಾಯಿತು.

**ಪಾಟೀಸವಾಲುಃ- ಫಿರ್ಯಾದಿ ಪರ ವಕೀಲರಿಂದ ಃ**

ಫಿರ್ಯಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಜಮಖಂಡಿ**

ಸಿಸಿ .ನಂ.323/2025

ಡಿ.ಡಬ್ಲೂ-2

ಹೆಸರು ಃ ಚಂದ್ರಶೇಖರ ಬೋವಿ

ತಂದೆ ಹೆಸರು ಃ ಹಣಮಂತ

ವಯಸ್ಸು ಃ 38 ವರ್ಷ

ಉದ್ಯೋಗ ಃ ಗುತ್ತಿಗೆದಾರ

ವಾಸ ಸ್ಥಳ ಃ ಜಮಖಂಡಿ.

ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆ.**

1. ಫಿರ್ಯಾದಿ ನನ್ನ ಸ್ವಂತ ಅಣ್ಣನ ವಿರುದ್ದ ಚೆಕ್‌ಬೌನ್ಸ ಕೇಸ ದಾಖಲಿಸಿದ್ದಾರೆ. ನಾವು ಫಿರ್ಯಾದಿಯವರಿಂದ 6,50,000/- ರೂಪಾಯಿ ಹಣ ಪಡೆದಿದ್ದು, ಅದಕ್ಕಾಗಿ ಮುಧೋಳದಲ್ಲಿ ಇರುವ ನಮ್ಮ ಅಣ್ಣನ ಆಸ್ತಿಯನ್ನು ಫಿರ್ಯಾದಿಗೆ ಖರೀದಿ ಬರೆದುಕೊಟ್ಟಿದ್ದೇವು. ಸದರಿ ಖರೀದಿ ಪತ್ರ 7 ಲಕ್ಷ ರೂಪಾಯಿಗೆ ಮಾಡಿಕೊಂಡಿದ್ದು ನಾವು 6,50,000/- ರೂಪಾಯಿ ಪಡೆದಿದ್ದೇವು ಸದರಿ ಹಣಕ್ಕೆ ನಾವು ತಿಂಗಳಿಗೆ 3% ಹಾಗೆ ಒಟ್ಟು 19,500/- ಬಡ್ಡಿ ನೀಡಿದ್ದೇವು. ನಂತರ 2018 ರಲ್ಲಿ ನಮ್ಮ ಹಣ ಬಂದಿದ್ದು, ನಾವು ಫಿರ್ಯಾದಿಯವರ ಹಣವನ್ನು ಮರುಪಾವತಿಸಿ ನಾವು ಬರೆದು ಕೊಟ್ಟಿರುವ ಖರೀದಿ ಪತ್ರ ರದ್ದತಿ ಮಾಡಿಕೊಂಡೆವು. ಸದರಿ ಖರೀದಿ ಪತ್ರ ಮತ್ತು ಖರೀದಿ ರದ್ದತಿ ಪತ್ರ ಮಾಡುವಾಗ ನಾನು ಖುದ್ದು ಹಾಜರ ಇದ್ದು ಎರಡು ದಾಖಲೆಗಳಿಗೆ ಸಹಿ ಮಾಡಿದ್ದೇನೆ ಸಾಕ್ಷಿ ನಿಡಿ-1 ಮತ್ತು ನಿಡಿ-2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಡಿ-1(ಬಿ) ಮತ್ತು ನಿಡಿ-2(ಬಿ) ಎಂದು ಗುರುತಿಸಲಾಯಿತು. ಸದರಿ ವ್ಯವಹಾರದ ವೇಳೆ ಫಿರ್ಯಾದಿಯವರಿಗೆ ನಮ್ಮ ಅಣ್ಣ ಭದ್ರತೆಗಾಗಿ ವಿಜಯ ಬ್ಯಾಂಕನ ಎರಡು ಚೆಕ್ಕಗಳನ್ನು ಕೊಟ್ಟಿದ್ದರು. ಸದರಿ ಚೆಕ್ಕಗಳನ್ನು ಫಿರ್ಯಾದಿ ನಮ್ಮ ಅಣ್ಣನಿಗೆ ವಾಪಸ್ಸ ಕೊಡಲಿಲ್ಲ ಮತ್ತು ಮುಧೋಳದಿಂದ ಜಮಖಂಡಿಗೆ ಬಂದ ವೇಳೆ ಕೊಡುತ್ತೇನೆ ಎಂದು ರದ್ದತಿ ವೇಳೆ ಹೇಳಿದ್ದರು. ನಂತರ ನಾವು ಚೆಕ್ಕ ಕೇಳಿದರು ಸಹ ಅವರು ಕೊಡದೇ ಇದ್ದಾಗ ಒಂದು ಸಲ ನಮ್ಮಿಬ್ಬರಿಗೂ ಜಗಳವಾಯಿತು. ಆಗ ಸದರಿ ಚೆಕ್ಕಗಳು ಕಳೆದಿವೆ ಎಂದು ಒಂದು ಪೇಪರ ಮೇಲೆ ಬರೆದು ಕೊಡುವಂತೆ

ಫಿರ್ಯಾದಿಗೆ ಕೇಳಿದಾಗ ಚೆಕ್ಕಗಳು ಸಿಕ್ಕಿಲ್ಲ ನೀವು ಏನುಬೇಕಾದರೂ ಮಾಡಿಕೊಳ್ಳಿ ಎಂದು ಹೋರಟು ಹೋದರು. ಸದರಿ ಚೆಕ್ಕುಗಳಿಗೆ ಸಂಬಂಧಪಟ್ಟಹಾಗೆ ಈ ಪ್ರಕರಣ ದಾಖಲಿಸಿದ್ದಾರೆ.

**ಪಾಟೀಸವಾಲುಃ- ಫಿರ್ಯಾದಿ ಪರ ವಕೀಲರಿಂದ ಃ**

ಫಿರ್ಯಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ

ಸಾಕ್ಷಿಯ ಸಹಿ